ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 21-12-2023

ಮುಖ್ಯ ವಿಚಾರಣೆಃ ಶ್ರೀ. ಕೆ.ಪಿ.ಪಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತದೆ. ಆದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಸೋಮವಾರಪೇಟೆ ತಾಲ್ಲೂಕು, ಹುಲ್ಕೊಡು ಗ್ರಾಮದ ಸರ್ವೆ ನಂ. 28 ರ ಪಹಣಿಯನ್ನು ನಿಡಿ 1 ಎಂದು, ಅದೇ ಗ್ರಾಮದ ಸರ್ವೆ ನಂ. 29 ರ ಪಹಣಿಯನ್ನು ನಿಡಿ 2 ಎಂದು, ಅದೇ ಗ್ರಾಮದ ಸರ್ವೆ ನಂ. 35 ರ ಪಹಣಿಯನ್ನು ನಿಡಿ 3 ಎಂದು, ರಿಟ್ ಪಿಟಿಷನ್ ನಂ. 28236/2018 ರ ಆದೇಶದ ದೃಡೀಕೃತ ನಕಲನ್ನು ನಿಡಿ 4 ಎಂದು, ಹುಲ್ಕೊಡು ಗ್ರಾಮದ ಸರ್ವೆ ನಂ. 35 ರ 2017-18 ನೇ ಸಾಲಿನ ಪಹಣಿಯನ್ನು ನಿಡಿ 5 ಎಂದು, ಅದೇ ಗ್ರಾಮದ ಸರ್ವೆ ನಂ. 29 ರ ಪಹಣಿಯನ್ನು ನಿಡಿ 6 ಎಂದು, ಅದೇ ಗ್ರಾಮದ ಸರ್ವೆ ನಂ. 28 ರ 2016-17 ರ ಪಹಣಿಯನ್ನು ನಿಡಿ 7 ಎಂದು, ಕನ್ನೇಶ್ವರ ದೇವಸ್ಥಾನ ಸಮಿತಿಯವರು ಮಾಡಿರುವ ನಿರ್ಧಾರದ ದೃಡೀಕೃತ ನಕಲನ್ನು ನಿಡಿ 8 ಎಂದು, ವಕೀಲರ ನೋಟಿಸನ್ನು ನಿಡಿ 9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

Sd/-

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.